

ಅಲ್ಲಿಂದ ಎಬ್ಬಿಸಿದ್ದಾರೆ. ಬೆಂಗಳೂರಿನ ವೃದ್ಧಾಶ್ರಮವೊಂದಕ್ಕೆ ಸೇರಿಸಿದ್ದಾರೆ. ಒಂದು ನಾಲ್ಕು ವರ್ಷ ಮನೆಯಲ್ಲಿ ಇಟ್ಟುಕೊಂಡ ನಾಟಕವಾಡಿ... ಈಗ ವೃದ್ಧಾಶ್ರಮಕ್ಕೆ ಸೇರಿಸಿದ್ದಾರೆ. ಹಸುರಿನ ನಡುವೆ ಇದ್ದವರನ್ನು ಕಾಂಕ್ರೀಟ್ ಕಾಡಿಗೆ ದೂಡಿದ್ದಾರೆ. ಬೆಂಗಳೂರಿನಲ್ಲೇ ಇರುವ ತಮ್ಮ, ಅಮ್ಮ ಸಂತೋಷವಾಗಿಯೇ ಇದ್ದಾರೆ ಅನ್ನುತ್ತಾನೆ. ಅಣ್ಣ ಅವನ ಮಗಳ ಮನೆ ಅಂತ ಆಸ್ಟ್ರೇಲಿಯಾಗೆ ಹೋಗಿ ಕೂತಿದ್ದಾನೆ. ಅಮ್ಮ ಕೂಡ ಹೆಚ್ಚು ಮಾತಾಡೊಲ್ಲ. ಫೋನೇ ರಿಸೀವ್ ಮಾಡಲ್ಲ. ಮಾಡಿದಾಗ ಮಾತೇ ಆಡೊಲ್ಲ. ಆಡಿದರೆ ಎರಡೇ ಮಾತು. ಎಲ್ಲಾ ಚೆನ್ನಾಗಿದೆ, ಯೋಚನೆ ಮಾಡಬೇಡ. ಅಂತಷ್ಟೇ...'

'ನೀನು.. ನೀನು ಎಲ್ಲಿ ಇರುವುದು?

'ಆಗಲೇ ಹೇಳಿದ್ನಲ್ಲ ಮೇಡಂ.. ಡೆನ್ವರಿನಲ್ಲಿ...'

'ಅಲ್ಲಿಗೇ ಕರೆದುಕೊಂಡು ಹೋಗು ನಿಮ್ಮ ಅಮ್ಮನ್ನ...'

'ಡೆನ್ವರ್‌ನಲ್ಲಿ ನಾನು ಇರುವುದು... ಬೆಂಗಳೂರಿನಲ್ಲೋ, ಶಿವಮೊಗ್ಗದಲ್ಲಿಯೋ ಇದ್ದಿದ್ದರೆ ಅಮ್ಮನ್ನ ನೋಡಿಕೊಳ್ಳುತ್ತಿದ್ದೆ...'

'ಬಂದು ಬಿಡು ಇಲ್ಲಿಗೇ'

'ಎಷ್ಟು ಸಲೀಸಾಗಿ ಹೇಳ್ತಿದ್ದೀರಿ, ಇಲ್ಲಿ ನನ್ನ ಮನೆ, ಮಕ್ಕಳು, ಗಂಡ, ಕೆಲಸ ಎಲ್ಲಾ ಬಿಟ್ಟು ಬರೋಕ್ಕೆ ಆಗುತ್ತಾ...

'ನಿನ್ನ ಅಣ್ಣ, ತಮ್ಮನಿಗೆ ಮನೆ, ಮಡದಿ, ಮಕ್ಕಳು, ಕೆಲಸ ಎಲ್ಲಾ ಇರಬೇಕು ಅಲ್ಲವೇ?'

'ಗಂಡು ಮಕ್ಕಳು ನೋಡಿಕೊಳ್ಳಬೇಕಲ್ಲವೇ ಮೇಡಂ? ಆಸ್ತಿ ತಗೊಂಡಿದಾರಲ್ಲವೇ?'

'ಆಸ್ತಿ ಇಲ್ಲದಿದ್ದರೆ ನೋಡಿಕೊಳ್ಳಬೇಕಿಲ್ಲವೇ? ನೀನು ಬಂಗಾರ, ಬೆಳ್ಳಿ ಎಲ್ಲಾ ತಗೊಂಡೆ ಅಂದೆಯಲ್ಲವೇ?.. ನಿನ್ನ ಅಪ್ಪ ಅಮ್ಮ ನಿನ್ನ ಓದಿಸಿಲ್ಲವೇ? ಮದುವೆ ಮಾಡಿಕೊಡಲಿಲ್ಲವೇ?'

ನಾನಾ... ಮಾತನಾಡುತ್ತಿರುವುದು? ಮಾತೇ ಬೇಡ ನನಗೀಗ.

'ಏನು ಮೇಡಂ ಹೀಗೆ ಹೇಳ್ತಾ ಇದ್ದೀರಿ?'

'ಜೊತೆಗೆ ಆಸ್ತಿ ಇಲ್ಲದೆ ಹೋದರೂ ಅಪ್ಪ ಅಮ್ಮನ ನೋಡಿಕೊಳ್ಳಬೇಕಿಲ್ಲವೇ? ಈ ನೋಡಿಕೊಳ್ಳುವುದು ಅಂದರೆ ಏನು? ಜೊತೆಯಲ್ಲಿ ಇರುವುದಷ್ಟೆಯೇ?'

'ಅಲ್ಲ ಮೇಡಂ, ನಿಮ್ಮ ಕಾದಂಬರಿ, 'ಅನುಬಂಧ'ದಲ್ಲಿ ನಾಯಕಿ ಕಾವೇರಿಯ ತಾಯಿಯನ್ನು ಅವಳ ಅಣ್ಣಂದಿರು ದೇವತೆಯಂತೆ ನೋಡಿಕೊಳ್ಳುತ್ತಾರೆ. ಕಾವೇರಿ ತನ್ನ ಅತ್ತೆಯನ್ನು ತಾಯಿಯಂತೆ ಜೋಪಾನ ಮಾಡುತ್ತಾಳೆ. ನೀವು ಅದೆಷ್ಟು ಚೆನ್ನಾಗಿ ವಿವರಿಸಿದ್ದೀರಿ'.

'ಬದುಕು ಬೇರೆ ಬರಹ ಬೇರೆ ಬರಹ ಆಕಾಂಕ್ಷೆ... ಬದುಕು ವಾಸ್ತವ...!' ಮೆಲ್ಲನೆ ಹೇಳಿದೆ.

ಅವಳು ಮಾತನಾಡುತ್ತಲೇ ಇದ್ದಳು. ಬರೀ ಶಬ್ದ... ಗಲಾಟೆ... ಸ್ಪಷ್ಟತೆಯೇ ಇಲ್ಲ.

ಹಿಯರಿಂಗ್ ಏಡಿನ ಬ್ಯಾಟರಿ ಸತ್ತಿರಬೇಕು ಅಥವಾ ನನ್ನ ಹಾಗೆ ಸಾಯುವ ಹಾದಿಯಲ್ಲಿರಬೇಕು. ಅಥವಾ ನಾನು ಹೇಳುವುದೆಲ್ಲಾ ಹೇಳಿಯಾಗಿತ್ತು. ಮಾತು ಬೇಕಿರಲಿಲ್ಲ. ಕರೆ ಕಟ್ ಮಾಡಿ, ಫೋನ್ ಟೇಬಲ್ ಮೇಲೆ ಇಟ್ಟು ಹಿಯರಿಂಗ್ ಏಡ್ ತೆಗೆದಿರಿಸಿದೆ. ಕನ್ನಡಕ ಅದರ ಪಕ್ಕವೇ ಇತ್ತು. ಆಗ ಕಾಣಲೇ ಇಲ್ಲ.

ಕಣ್ಣು ಕಾಣಿಸುವುದಿಲ್ಲ. ಕುರುಡಲ್ಲ. ಸರಿಯಾಗಿ ಕಾಣಿಸುವುದಿಲ್ಲ! ಕಿವಿ ಕೇಳಿಸುವುದಿಲ್ಲ. ಕಿವುಡಲ್ಲ. ಸರಿಯಾಗಿ ಕೇಳಿಸುವುದಿಲ್ಲ ಅಷ್ಟೇ. ಮಾತಿನಲ್ಲೂ ಮುಂಚಿನ ಸ್ಪಷ್ಟತೆಯಿಲ್ಲ. ಮೂವತ್ತೆರಡು ಹಲ್ಲುಗಳು ಇರುತ್ತವೆ ಎಂದು ಶಾಲೆಯಲ್ಲಿ ಓದಿದ್ದಷ್ಟೇ... ನನಗೆ ಅಷ್ಟು ಇದ್ದವು ಎಂದು ನನಗೆ ಎಂದೂ ಅನಿಸಿಯೇ ಇಲ್ಲ. ಈಗಂತೂ ಹತ್ತೋ ಹನ್ನೆರಡೋ ಇರಬೇಕಷ್ಟೇ. ಹಾಗಾಗಿ ಮಾತೂ ತೊದಲುತ್ತೆ. ನಡಿಗೆಯಂತೂ ಹೆಜ್ಜೆಯ ಮೇಲೆ ಹೆಜ್ಜೆ ಇಡುವ ಮಹಾಲಕ್ಷ್ಮಿಯೇ.

ಕಟ್ಟಿಸಿಕೊಂಡ ಹಲ್ಲು, ಹಿಯರಿಂಗ್ ಏಡ್, ಕನ್ನಡಕ ತೆಗೆದಿರಿಸಿ ನೆಮ್ಮದಿಯಾಗಿ ಮಲಗುತ್ತಿದ್ದ ಸೋದರತ್ತೆಯ ನೆನಪು. ಮುಪ್ಪಿನ ಕಷ್ಟದ ಪರಿಸ್ಥಿತಿ ಬೇಡವೆಂದರೆ ಅಕಾಲ ಮರಣ ಹೊಂದಬೇಕು. ಅಥವಾ ಕಷ್ಟದ ಅರಿವು ಆಗದ ಹಾಗೆ ಆರೋಗ್ಯ, ಸಂಸಾರ ಇರಬೇಕು. ದೀರ್ಘಾಯಸ್ಸು ಶಾಪ ಹಲವರಿಗೆ.

ಅಜ್ಜಿ ಮಾಡುತ್ತಿದ್ದ ಹುಣಸೇಕಾಯಿ ರಸದ ರುಚಿ ಈಗಲೂ ನಾಲಿಗೆಯಲ್ಲಿ, ಮನಸ್ಸಿನಲ್ಲಿ ಸ್ಥಿರವಾಗಿದೆ. ಆದರೆ ಬೆಳಗ್ಗೆ ತಿಂಡಿ ತಿಂದದ್ದು ಏನು ಎಂದಿರಲಿ, ತಿಂದೆನಾ ಎಂದು ಕೂಡ ನೆನಪಿಲ್ಲ.

'ಯಾರು ಫೋನ್ ಮಾಡಿದ್ದು ಮಗಳಾ?' ಮಬ್ಬು ಮಬ್ಬು ಆಕೃತಿ. ಆದರೆ ಕಿವಿಗೆ ಬಿದ್ದ ದನಿ ಚಿರಪರಿಚಿತ... ಲಲಿತೆಯದು... ಇಲ್ಲಿ ನನ್ನ ನೋಡಿಕೊಳ್ಳುತ್ತಾ ಇರುವವಳು.

'ಮಗಳಲ್ಲ. ಅದ್ಯಾರೋ ನನ್ನ ಕಥೆಗಳನ್ನು ಇಷ್ಟಪಟ್ಟು ಓದುತ್ತಿದ್ದವಳಂತೆ. ಈಗ ಅವಳ ಕಥೆ ಬರೆಯಬೇಕಂತೆ...'

ಪೇಪರ್ರಿನ ಕಟ್ಟು, ಪೆನ್ನು ತರಿಸಲೇ? ಬರೆಯುತ್ತೀರಾ? ನಕ್ಕಳು ಲಲಿತೆ.

'ಮೊದಲು ಕನ್ನಡಕ ಹಾಕಿಕೊಳ್ಳಿ'

'ಹಾಕಿಕೊಂಡರೂ ಸರಿಯಾಗಿ ಕಾಣಿಸುವುದಿಲ್ಲ... ಅವಳು ಕೈಗಿತ್ತ ಕನ್ನಡಕವನ್ನು ಕಣ್ಣಿಗೇರಿಸಿದೆ.

'ಕ್ಯಾಟರ್ರ್ಯಾಕ್ಟ್ ಆಪರೇಷನ್ ಮಾಡಿಸಬೇಕು. ನಿಮ್ಮ ಮಗಳಿಗೆ, ಮಗನಿಗೆ ಇಬ್ಬರಿಗೂ ಹೇಳಿದ್ದೇವೆ. ಇನ್ನೂ ಏನೂ ಹೇಳಿಲ್ಲ...'

'ಹೇಳುವುದೂ ಇಲ್ಲ. ನಾನು ಮಾಡಿಸಿಕೊಳ್ಳುವುದೂ ಇಲ್ಲ. ಪೂರಾ ಕುರುಡಾದರೆ ನೀನೇ ಎರಡು ತುತ್ತು ಊಟ ಮಾಡಿಸಿಬಿಡು. ನಾನು ಕೂತಲೇ'

'ಸೇವೆ ಮಾಡಿಸಿಕೊಳ್ಳಲು ಎಷ್ಟು ಆಸೆ ನಿಮಗೆ. ನನ್ನ ಮಾತು ಚೆನ್ನಾಗಿ ಕೇಳಿಸುತ್ತೆ. ಬೇರೆಯವರ ಮಾತು ಕೇಳಿಸುವುದೇ ಇಲ್ಲವಲ್ಲ ಯಾಕೆ?'

ಅದೇಕೋ... ನೀನೇ ಹೇಳು...'

'ಹಿಯರಿಂಗ್ ಏಡ್ ಬೇಡ ನಿಮಗೆ. ಕೇಳಿಸುತ್ತದೆ ಹಾಗೆಯೇ ಬೇರೆಯವರ ಮಾತು. ಅದೂ ಕರೆ ಮಾಡುವವರ ಮಾತು ಬೇಡ ನಿಮಗೆ. ಅದಕ್ಕೆ ಕೇಳಿಸೊಲ್ಲ ಅಂತ ಸಬೂಬು ಹೇಳ್ತೀರಿ. ಈಗ ನಡೀರಿ ಎಲ್ಲರೊಂದಿಗೆ ಊಟ ಮಾಡುವಿರಂತೆ...'

'ಊಟ? ಆಯಿತಲ್ಲವೇ? ಈಗ ಕಾಫಿ ಕುಡಿಯುವ ಸಮಯ'. ಕೈ ಹಿಡಿದು ನಡೆಸಿದವಳ ಪಕ್ಕ ಹೆಜ್ಜೆ ಹಾಕಿದೆ.

'ಇದೂ ನಾಟಕ! ಮರೆವಿನ ನಾಟಕ ನಿಮ್ಮದು. ಈಗಿನ್ನ ಒಂದೂ ಕಾಲು. ಊಟದ ಸಮಯ. ಗೊತ್ತು ನಿಮಗೆ...'

ನಕ್ಕೆ. ನಕ್ಕು ಬಿಡುವುದೇ ವಾಸಿ. ನಕ್ಕರೆ ಸುತ್ತಾ ಇರುವವರು ನಗುತ್ತಾರೆ. ಅಳುತ್ತಿದ್ದರೆ ಎಲ್ಲರೂ ದೂರ ಸರಿಯುತ್ತಾರೆ. ಅಥವಾ ಕರುಣೆಯಿಂದ ನೋಡುತ್ತಾರೆ. ಕರುಣೆ ನನಗೆ ಬೇಡ. ಸಾಯುವ ಗಳಿಗೆಯಲ್ಲಿಯೂ ಕರುಣೆ ಬೇಡ.

'ಸರೋಜ, ಅವರ ಊಟವಾದ ಮೇಲೆ ನನ್ನ ಕರೆದುಕೊಂಡು ಬರಬೇಕಿತ್ತು' ಮೆಲ್ಲನೆ ಹೇಳಿದೆ.

ಡೈನಿಂಗ್ ಹಾಲ್ ಇನ್ನೂ ಮಾರು ದೂರವಿತ್ತು. ಆದರೆ ಸರೋಜಳ ದನಿ, ನಗು... ತೇಲಿ ಬರುತ್ತಿತ್ತು. ನಕ್ಕಳು ಲಲಿತ.